ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಹುಣಸೂರು

ಸಿ.ಸಿ. ನಂ. **19/2018**

ಸಿ.ಡಬ್ಲ್ಯೂ**-2** ಪಿ.ಡಬ್ಲ್ಯೂ **-2**

ದಿಃ **16.08.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಮಲ್ಲೇಶ |
| ಗಂಡ/ತಂದೆಯ ಹೆಸರು | ಚನ್ನಮಲ್ಲೇಗೌಡ |
| ವಯಸ್ಸು | ಸುಮಾರು **49** ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಮೈಲಾಂಬೂರು ಗ್ರಾಮ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ-1 ನನ್ನ ಹೆಂಡತಿ. ಚಾಸಾ-3 ನನ್ನ ತಾಯಿ. ಚಾಸಾ-4 ನನ್ನ ಅತ್ತೆ. ಆರೋಪಿತರು ನಮ್ಮ ಪಕ್ಕದ ಮನೆಯವರು. ಸುಮಾರು 5 ವರ್ಷಗಳ ಹಿಂದೆ ನಾನು ಹಾಗೂ ಚಾಸಾ-1, 3 ರಿಂದ 5 ರವರು ಮನೆಯಲ್ಲಿದ್ದಾಗ ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಆರೋಪಿತರೆಲ್ಲರೂ ಒಗ್ಗಟ್ಟಾಗಿ ಅಲ್ಲಿಗೆ ಬಂದು, ಮನೆಯ ಹತ್ತಿರ ಬಂದು ಬೊಳಿ ಮಕ್ಕಳಾ, ಸೂಳೆ ಮಕ್ಕಳಾ, ಮನೆ ಬಿಡಿ ಎಂದು ಹೇಳಿದರು. ಆಗ ನಾನು 50-70 ವರ್ಷ ಆಗಿದೆ, ಯಾಕೆ ಬಿಡಲಿ ಅಂತ ಕೇಳಿದೆ. ಆಗ 1ನೇ ಆರೋಪಿಯು ನನ್ನನ್ನು ತಬ್ಬಿ ಹಿಡಿದು ನೆಲಕ್ಕೆ ಕೆಡವಿದ. 3 ಮತ್ತು 4ನೇ ಆರೋಪಿತರು ನನ್ನ ಬಲ ಪಕ್ಕೆಗೆ ತುಳಿದರು. 2ನೇ ಆರೋಪಿ ದೊಣ್ಣೆಯಿಂದ ನನ್ನ ಹಣೆ ಹಾಗೂ ತುಟಿಗೆ ಹೊಡೆದನು. ಆಗ ಚಾಸಾ-3 ರವರು ಬಿಡಿಸಲು ಮುಂದಾದಾಗ, 1ನೇ ಆರೋಪಿ ದೊಣ್ಣೆಯಿಂದ ಚಾಸಾ-3 ರವರ ಬಲಬುಜಕ್ಕೆ, ಪಕ್ಕೆಗೆ ಮತ್ತು ಹಣೆಗೆ

ಹೊಡೆದಿರುತ್ತಾನೆ. ಆಗ ಚಾಸಾ-4 ರವರು ಸಹ ಜಗಳ ಬಿಡಿಸಲು ಬಂದಾಗ, 1ನೇ ಆರೋಪಿ ಅದೇ ದೊಣ್ಣೆಯಿಂದ ಎಡಕಾಲಿನ ತೊಡೆಗೆ ಮತ್ತು ಹೆಬ್ಬರಳಿಗೆ ಹೊಡೆದಿರುತ್ತಾನೆ. ಆಗ ಚಾಸಾ-1 ರವರು ಜಗಳ ಬಿಡಿಸಲು ಬಂದಾಗ, 5ನೇ ಆರೋಪಿ ಮುಂದಲೆ ಹಿಡಿದು ಎಳೆದಾಡಿರುತ್ತಾಳೆ. ಚಾಸಾ-5 ಹೊಡೆಯುವುದನ್ನು ನೋಡಿ ಬಿಡಿಸಲು ಬಂದಾಗ 2ನೇ ಆರೋಪಿ ಇನ್ನೊಂದು ದೊಣ್ಣೆಯಿಂದ ಎಡಗೈಗೆ ಹೊಡೆದು ಗಾಯಪಡಿಸಿರುತ್ತಾನೆ. ಚಾಸಾ-6 ಮತ್ತು 7 ರವರು ಉಪಹಾರ ಗೃಹದಲ್ಲಿ ಕುಳಿತಿದ್ದು, ಬಿಡಿಸಲು ಬಂದರು. ಆರೋಪಿತರು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಮನೆಗೆ ಹೋದರು. ನಂತರ ಚಾಸಾ-1 ರವರು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ಹಾಗೂ ಚಾಸಾ-3 ಮತ್ತು 4 ರವರನ್ನು ಸೇರಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರೇ ನಮ್ಮ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳಾಗಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2 ನ್ನೇ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಗಳಾಗಿರುತ್ತವೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರು ಶ್ರೀ ಎಸ್.ಪಿ. ವಕೀಲರಿಂದಃ</u>

ಚಾಸಾ-6 ಮತ್ತು 7 ರವರು ನಿಮ್ಮ ಮನೆಯ ಅಕ್ಕಪಕ್ಕದಲ್ಲಿ ವಾಸ ಇಲ್ಲ ಎಂದರೆ ಸರಿ. ವೀರಭದ್ರಪ್ಪ, ಮಹಾದೇವ ಮತ್ತು ಮಣಿ ಎಂಬುವವರು ನಿಮ್ಮ ಮನೆಯ ಅಕ್ಕಪಕ್ಕದಲ್ಲಿ ವಾಸ ಇದ್ದಾರೆಂದರೆ ಸರಿ. ನಿಮ್ಮ ಮನೆಯ ಬಲಭಾಗಕ್ಕೆ ಆರೋಪಿತರ ಮನೆ ಇದೆ ಎಂದರೆ ಸರಿಯಲ್ಲ.

ಆರೋಪಿತರು ತಮ್ಮ ಮನೆಯ ಅಳತೆ ಕಾರ್ಯಕ್ಕೆ ಗಲಾಟೆ ನಡೆಯಿತು ಎಂದು ಹೇಳುವ **15** ದಿನಗಳ ಮುಂಚಿತವಾಗಿಯೇ ಅಳತೆ ಮಾಡಲು ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಅಳತೆ ಮಾಡಲು ಬಂದಾಗ ನಿಮಗೆ ನೊಟೀಸ್ ನೀಡಲಾಗಿತ್ತು ಎಂದರೆ ಸರಿ. ಅಳತೆ ಕಾರ್ಯ ಮಾಡಿದಾಗ ಎಷ್ಟು ಅಡಿಗಳು ಒಳಭಾಗಕ್ಕೆ ಬಂದಿತ್ತು ಎಂದರೆ ಸಾಕ್ಷಿ ನಮ್ಮ ಮನೆಯ ಅರ್ಧ ಭಾಗಕ್ಕೆ ಎಂದು ಹೇಳುತ್ತಾರೆ. ಅಳತೆ ಮಾಡಲು ಬಂದಾಗ ಅಳತೆಯನ್ನು ಗುರುತಿಸಿ ಕಲ್ಲು ನೆಟ್ಟು ಹೋಗಿದ್ದರು ಎಂದರೆ ಸರಿ. ಅಳತೆ ಕಾರ್ಯ ಮಾಡುವಾಗ ಅಳತೆ ಸರಿಯಿಲ್ಲ ಎಂದು ನೀವೇನು ತಕರಾರು ಮಾಡಿಲ್ಲ ಎಂದರೆ ಸಾಕ್ಷಿ ಮಾಡಿದ್ದೇವು ಎಂದು ಹೇಳುತ್ತಾರೆ. ಯಾರ ಬಳಿ ತಕರಾರು ಮಾಡಿದ್ದೀರಿ ಎಂದರೆ ಸಾಕ್ಷಿ ಅಳತೆ ಮಾಡುವವರ ಬಳಿಯೇ ತಕರಾರು ಮಾಡಿದ್ದೇವು ಎಂದು ಹೇಳುತ್ತಾರೆ. ಆರೋಪಿತರು ಜಾಗದ ಸಂಬಂಧ ನಿಮ್ಮ ವಿರುದ್ಧ ಯಾವುದೇ ಅಸಲು ದಾವೆ ದಾಖಲಿಸಿಲ್ಲ ಎಂದರೆ ಸಾಕ್ಷಿ ನೊಂದಾಯಿತ ದಾಖಲೆ ಆಗಿದೆ ಎಂದು ಹೇಳುತ್ತಾರೆ. ನೊಂದಾಯಿತ ಪತ್ರದ ಪ್ರಕಾರ ನೀವೇನು ಯಾವುದೇ ಅಸಲು ದಾವೆ ಹೂಡಿಲ್ಲ ಎಂದರೆ ಸರಿ.

ಘಟನೆ ನಡೆಯಿತು ಎಂದು ಹೇಳುವ ದಿನದಂದು ನಿಮಗೂ ಹಾಗೂ ಆರೋಪಿತರ ನಡುವೆ ಮಾತುಕತೆಯಾಯಿತಾ ಎಂದರೆ ಸಾಕ್ಷಿ ಆಗಿದೆ ಎಂದು ಹೇಳುತ್ತಾರೆ. ಮಾತುಕತೆ ನಡೆಯುವ ಕಾಲಕ್ಕೆ ವೀರಭದ್ರಪ್ಪ, ಮಹಾದೇವ ಮತ್ತು ಮಣಿ ಯಾರಾದರೂ ಬಂದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆರೋಪಿತರು ಮಾತನಾಡಲು ನಿಮ್ಮ ಮನೆಯ ಒಳಗಡೆ ಬಂದಿದ್ದರಾ ಎಂದರೆ ಸಾಕ್ಷಿ ಇಲ್ಲ, ರಸ್ತೆಯ ಮೇಲೆ ಇದ್ದರು ಎಂದು

ಹೇಳುತ್ತಾರೆ. ನಿಮ್ಮ ಮನೆಯ ಹೊರಗಡೆ ನಿಂತುಕೊಂಡರೆ 50 ಅಡಿ ದೂರದಲ್ಲಿರುವ ಬಸವೇಶ್ವರ ದೇವಸ್ಥಾನ ಕಾಣಿಸುತ್ತದೆಂದರೆ ಸರಿ. ಸದರಿ ದೇವಸ್ಥಾನದ ಪಕ್ಕದಲ್ಲಿ ಉಪಹಾರದ ಗೃಹ ಹಾಗೂ ಅಂಗಡಿಗಳು ಇವೆ ಎಂದರೆ ಸಾಕ್ಷಿ ಅಂಗಡಿ ಇಲ್ಲ, ಉಪಹಾರ ಗೃಹ ಇದೆ ಎಂದು ಹೇಳುತ್ತಾರೆ. ಬೆಳಿಗ್ಗೆ 7.00 ರಿಂದ 8.00 ಗಂಟೆಗೆ ದೇವಸ್ಥಾನ ಹಾಗೂ ಉಪಹಾರ ಗೃಹದಲ್ಲಿ ಸುಮಾರು 50-60 ಜನ ಸೇರುತ್ತಾರೆಂದರೆ ಸರಿ. ಸದರಿ ಜಾಗದಲ್ಲಿ ನಿಮ್ಮ ಗ್ರಾಮಸ್ಥರೇ ಜಾಸ್ತಿ ಇರುತ್ತಾರೆಂದರೆ ಸರಿ.

ಘಟನೆ ನಡೆಯಿತು ಎಂದು ಹೇಳುವ ದಿನದಂದು ಅಲ್ಲಿದ್ದ 50-60 ಜನ ಸ್ಥಳಕ್ಕೆ ಬಂದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಘಟನೆ ನಡೆಯಿತು ಎಂದು ಹೇಳುವ ದಿನದಂದು ಮಾತುಕತೆ ಎಷ್ಟು ಸಮಯ ನಡೆಯಿತು ಎಂದರೆ ಸಾಕ್ಷಿ 7.00 ರಿಂದ 8.00 ಗಂಟೆಯವರೆಗೂ ಎಂದು ಹೇಳುತ್ತಾರೆ. ಮು.ಮಾ-1 ಮತ್ತು 2 ನಿಮ್ಮ ಮನೆಯ ಬಳಿಯೇ ಇದ್ದವು ಎಂದರೆ ಸಾಕ್ಷಿ ನಮ್ಮ ಮನೆ ಬಳಿ ಸೌದೆ ಹಾಕಿಕೊಂಡಿದ್ದೇವು ಎಂದು ಹೇಳುತ್ತಾರೆ. ಮು.ಮಾ-1 ಮತ್ತು 2 ನ್ನು ಪೊಲೀಸರಿಗೆ ನೀವೇ ಕೊಟ್ಟಿದ್ದು ಎಂದರೆ ಸಾಕ್ಷಿ ಅವರು ಹೊಡೆದಿದ್ದ ದೊಣ್ಣೆಗಳನ್ನು ತೆಗೆದುಕೊಂಡು ಬಂದರು ಎಂದು ಹೇಳುತ್ತಾರೆ. ನಿಮ್ಮ ಮನೆಯಲ್ಲಿ ಒಲೆ ಹಚ್ಚಿಕೊಳ್ಳಲು ಮು.ಮಾ-1 ಮತ್ತು 2 ರಂತಹ ಸೌದೆಗಳನ್ನು ಇಟ್ಟುಕೊಂಡಿದ್ದೀರಿ ಎಂದರೆ ಸಾಕ್ಷಿ ಒಲೆ ಹಚ್ಚುವುದಿಲ್ಲ, ಗ್ಯಾಸ್ ಇದೆ ಎಂದು ಹೇಳುತ್ತಾರೆ. ನಿಮ್ಮ ಮನೆಯ ಬಳಿ ಎಷ್ಟು ಸೌದೆ ಇದೆ ಎಂದರೆ ಸಾಕ್ಷಿ ಒಂದು ಅರ್ಧ ಟೈರ್ ಗಾಡಿಯಷ್ಟು ಎಂದು ಹೇಳುತ್ತಾರೆ.

ಘಟನೆ ನಡೆಯಿತು ಎಂದು ಹೇಳುವ ದಿನದಂದು ಆಸ್ಪತ್ರೆಗೆ

**9.00** ರಿಂದ **9.30** ಗಂಟೆಯ ಒಳಗೆ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ವೈದ್ಯರಿಗೆ ಯಾರು ಹಲ್ಲೆ ಮಾಡಿದರು ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿದೆ ಎಂದು ಹೇಳುತ್ತಾರೆ. ವೈದ್ಯರ ಬಳಿ ನಿಮಗೆ ಯಾರು ಹೊಡೆದದ್ದು ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ಹೇಳುತ್ತಾರೆ. ನೀವು ಎಷ್ಟು ದಿನ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಇದ್ದೀರಿ ಎಂದರೆ ಸಾಕ್ಷಿ **6-7** ದಿನ ಎಂದು ಹೇಳುತ್ತಾರೆ. ಸದರಿ **6-7** ದಿನಗಳಲ್ಲಿ ಪೊಲೀಸರು ಆಸ್ಪತ್ರೆಗೆ ಭೇಟಿ ನೀಡಿ ಹೇಳಿಕೆ ಪಡೆದರಾ ಎಂದರೆ ಸಾಕ್ಷಿ ಪಡೆದರು ಎಂದು ಹೇಳುತ್ತಾರೆ. ಪೊಲೀಸರು ಘಟನೆ ನಡೆದ **3** ದಿನದ ನಂತರ ಆಸ್ಪತ್ರೆಗೆ ಬಂದು ಹೇಳಿಕೆ ಪಡೆದಿರುತ್ತಾರೆ. ಘಟನೆ ನಡೆಯಿತು ಎಂದು ಹೇಳುವ **3** ದಿನದ ನಂತರದ ಹೇಳಿಕೆ ಬಿಟ್ಟರೇ, ಬೇರೆ ಯಾವಾಗಲಾದರೂ ಪೊಲೀಸರು ನಿಮ್ಮ ಬಳಿ ಹೇಳಿಕೆ ಪಡೆದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ವೈದ್ಯರ ಬಳಿ ಗಲಾಟೆಯಾದ ಬಗ್ಗೆ ಹೇಳಿಕೆ ಕೊಟ್ಟೆ ಎಂದು ಸುಳ್ಳಾಗಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆಸ್ಪತ್ರೆಗೆ ದಾಖಲಾದ **3** ದಿನಗಳ ನಂತರ ಪೊಲೀಸರು ಆಸ್ಪತ್ರೆಗೆ ಬಂದು ಹೇಳಿಕೆ ಪಡೆದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಮನೆ ಬಿಡುವಂತೆ ಕೇಳಿದ್ದು, **50-70** ವರ್ಷ ಆಗಿದೆ, ಏಕೆ ಮನೆ ಬಿಡಲಿ ಎಂದು ಇದೆ ಮೊದಲ ಬಾರಿಗೆ ಹೇಳುತ್ತಿದ್ದು, ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ.

**1** ನೇ ಆರೋಪಿ ಚಾಸಾ-**4** ರವರಿಗೆ ಮು.ಮಾ-**1** ರಿಂದ ತೊಡೆಗೆ ಹೊಡೆದರು ಎಂದು ಇದೆ ಮೊದಲ ಬಾರಿಗೆ ಹೇಳುತ್ತಿದ್ದು, ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. **5** ವರ್ಷಗಳ ಹಿಂದೆ ಆರೋಪಿತರು ನಿಮ್ಮ ಮನೆಯ ಬಳಿ ಬೆಳಿಗ್ಗೆ **7.00**

ಗಂಟೆಯ ಸಮಯಕ್ಕೆ ಬಂದು, ಗಲಾಟೆ ಮಾಡಿ, ನಿಮಗೆ, ಚಾಸಾ-3 ರಿಂದ 5 ರವರಿಗೆ ಹೊಡೆದರು ಎಂದು ಸುಳ್ಳಾಗಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. 2 ನೇ ಆರೋಪಿ ನಿಮ್ಮ ಹಣೆಗೆ ಹಾಗೂ ತುಟಿಗೆ ಹೊಡೆದರು ಎಂದು ಇದೆ ಮೊದಲ ಬಾರಿಗೆ ಹೇಳುತ್ತಿದ್ದು, ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಜಾಗದ ವಿಚಾರದಲ್ಲಿ ನಿಮಗೂ ಹಾಗೂ ಆರೋಪಿತರಿಗೂ ತಕರಾರು ಇರುವುದರಿಂದ, ಆರೋಪಿತರು ಜಾಗ ಬಿಡುವಂತೆ ಅಸಲು ದಾವೆ ಹೂಡುತ್ತಾರೆಂಬ ಕಾರಣಕ್ಕಾಗಿ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ. ನೀವು ಜಮೀನಿಗೆ ಹೋಗುವಾಗ ದಾರಿಯಲ್ಲಿ ಬಿದ್ದು, ಗಾಯ ಮಾಡಿಕೊಂಡಿದ್ದು, ಅದನ್ನು ದುರುಪಯೋಗ ಪಡೆದು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಗಲಾಟೆಯಾಗಿಲ್ಲ, ಆರೋಪಿತರು ಮು.ಮಾ-1 ಮತ್ತು 2 ರಿಂದ ಹಲ್ಲೆ ಮಾಡಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.